ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿಯ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳು.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಹಾಗಿದ್ದರೆ ತಾವೇಕೆ ಈಗ ಆ ಕೆಲಸಕ್ಕೆ 28,840 ರೂ. ಗಳ ಅಂದಾಜು ತಯಾರಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಿರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಷ್ಟು ಹಣ ಖರ್ಚಾಗಿದೆ ಎಂದು ತಿಳಿಸಿದೆ. ಉತ್ತರವನ್ನೂ ಪ್ರಶ್ನೆಯನ್ನೂ ಮತ್ತೊಮ್ಮೆ ನೋಡಿ.

ಶ್ರೀ ಬಿ. ಕೆ. ನಾಗೂರ್.—ಈಗ ಆ ಪ್ರದೇಶದಿಂದ ಬಂದಿರತಕ್ಕ ಮಾನ್ಯ ಸದಸ್ಯರು ಅಲ್ಲಿ ನೀರು ಪೋಲಾಗಿ ಹೋಗುತ್ತಿದೆ ಎಂದು ಹೇಳುತ್ತಿದ್ದರೆ ಇಲ್ಲಿ ಮಂತ್ರಿಗಳು ನೀರು ಪೋಲಾಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇವರಲ್ಲಿ ಯಾರು ಹೇಳುವುದು ನಿಜ, ಯಾವುದು ಸರಿ? ಯಾವುದು ತಪ್ಪು?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ಆ ಪ್ರದೇಶದ ಇಂಜಿನಿಯರ್ ಅವರು ಅಲ್ಲಿ ಎಲ್ಲವನ್ನೂ ಪರಿಶೀಲನೆಮಾಡಿ ಇಷ್ಟಿಷ್ಟು ಜಮೀನಿಗೆ ಇಷ್ಟಿಷ್ಟೇ ನೀರು ಇರಬೇಕೆಂದು ನಿರ್ಧಾರಮಾಡಿ, ಆಬಗ್ಗೆ ನಮಗೆ ವರದಿಕಳುಹಿಸಿದ್ದಾರೆ. ಆ ವರದಿಯ ಆಧಾರದ ಮೇಲೆ ನಾವೀಗ ಉತ್ತರ ಕೊಟ್ಟಿದ್ದೇವೆ.

SHORT NOTICE QUESTION AND ANSWER.

Belabouring of villagers of Kanchinakatte by Police.

*Q.—10. Smt. RATNAMMA MADHAVA RAO (Shimoga).—

Will the Government be pleased to state:—

(a) whether it has come to the notice of Government that the Police of Shimoga Taluk belaboured the villagers and especially women of Kachinakatte village, Shimoga Taluk, indiscriminately on the 6th instant;

(b) if so, the action taken by Government in the matter?

A.—Sri B. D. JATTI (Chief Minister).—

(a) No.

(b) Does not arise in view of reply to (a).

ಶ್ರೀಮತಿ ರತ್ನಮ್ಮ ಮಾಧವರಾವ್.—ನಮ್ಮ ತಾಲ್ಲೂಕಿನ ಈ ಕಾಚಿನಕಟ್ಟೆ ಗ್ರಾಮದಿಂದ ಸರ್ಕಾರಕ್ಕೆ ಯಾವ ಅರ್ಜಿಗಳೂ ಬಂದಿಲ್ಲವೇ?

†ಶ್ರೀ ಬಿ.ಡಿ. ಜತ್ತಿ.—ಪ್ರಶ್ನೆ ಕೇಳುತ್ತಿರುವ ಮಾನ್ಯ ಸದಸ್ಯರು ಕಳುಹಿಸಿರತಕ್ಕ ಅರ್ಜಿಯೊಂದು ಮಾತ್ರ ಬಂದಿದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಆ ಅರ್ಜಿಯ ಬಗ್ಗೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ?

ಶ್ರೀ ಬಿ. ಡಿ. ಜತ್ತಿ.—ಆ ಅರ್ಜಿಯನ್ನು ಅವರ ಸಮಕ್ಷಮವೇ ವಿಚಾರಣೆ ಮಾಡಿರತಕ್ಕ ಅಂಶ ಅವರಿಗೇ ಗೊತ್ತಿದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಅಲ್ಲಿ ಹೆಂಗಸರು ಮಕ್ಕಳನ್ನೆಲ್ಲ ಹೊಡೆದಿದ್ದಾರೆ. ಆ ಬಗ್ಗೆ ಮೆಡಿಕಲ್ ಸರ್ಟಿಫಿಕೇಟನ್ನು ತಂದುಕೊಟ್ಟರೆ ತಾವು ಏನು ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಿ?

ಶ್ರೀ ಬಿ. ಡಿ ಜತ್ತಿ.—ಆ ವಿಚಾರಣೆ ಇನ್ನೂ ಪೂರ್ಣವಾಗಿ ಮುಗಿದಿಲ್ಲ. ಅದು ಮುಗಿದನಂತರ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಪೋಲೀಸಿನವರು ಮಾಡಿರತಕ್ಕ ತಪ್ಪನ್ನು ಪೋಲೀಸಿನವರೇ ವಿಚಾರಣೆ ಮಾಡುವಂತೆ ಮಾಡಿದರೆ ಸತ್ಯಾಂಶ ಹೊರಬೀಳಲು ಸಾಧ್ಯವೇ?

ಶ್ರೀ ಬಿ. ಡಿ. ಜತ್ತಿ.—ಕೆಳಗಿನ ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ರಿಪೋರ್ಟು ಬಂದರೆ ಅಯಾ ಇಲಾಖೆಯ ಮೇಲಧಿಕಾರಿಗಳು ವಿಚಾರಣೆಮಾಡುತ್ತಾರೆ. ಮೇಲಧಿಕಾರಿಗಳು ತಪ್ಪುಮಾಡಿದ್ದರೆ, ಆಗ ಸರ್ಕಾರದವರು ಅದನ್ನು ವಿಚಾರ ಮಾಡತಕ್ಕ ಪದ್ಧತಿಯೆ ಜಾರಿಯಲ್ಲಿದೆ.

Sri C. J. MUCKANNAPPA.—May I know the reason why the Police beat the ladies?

Sri B. D. JATTI.—That is a presumption which has to be decided after the enquiry is over and the report is submitted to the Government.

Sri J. B. MALLARADHYA.—At the time of the incident it is reported that two currency notes of one hundred rupees each were taken away by one of the police officers. Will the Government be pleased to make an enquiry about this also?

Sri B. D. JATTI.—Yes, that is one of the allegations made and it is also being enquired into.

Mr. SPEAKER.—Question hour is over.

QUESTIONS FOR ANSWERS. ON THE DAY

(but not taken up)

Misappropriation in the Leather Co-operative Societies.

*Q.—166. Sri J. L. KABADI (Indi).—

Will the Government be pleased to state:—

(a) the number of Leather Co-operative Societies and the Leather Tanning Co-operative Societies in the State and the amount paid to them as grants and loan;